




ದುಷ್ಟ ಹೃದಯ ಮೃದುವಾಗುವುದು ತೀವ್ರ ಹೊಡೆತ ಬಿದ್ದಾಗಲೇ. ಪರಿವರ್ತನೆ, ಸಮಾಜ ಬಯಸುವ ಪರಿವರ್ತನೆ, ಇದಕ್ಕೆ ದಿನಗಳು ಬೇಕು. ಪರಿವರ್ತನೆ ಶಾಶ್ವತ ಪರಿಹಾರ. ಅದೇ ಕಠಿಣ ಕೆಲಸ ಕೂಡ. ಆದರೆ ಮಾಡಲೇಬೇಕಾದ ಸಮಯವಿದು. ಈಗ ಶಿಕ್ಷಕರು ಈ ಸಮಯದಲ್ಲಿದ್ದಾರೆ. ಅವರು ಸಂಯಮದಿಂದ ಪರಿವರ್ತನೆಯ ಕೆಲಸ ಮಾಡಬೇಕಿದೆ.

# ನೈತಿಕತೆಯ ಬೀಜಕ್ಕೆ ಶಿಕ್ಷಕರೇ ಮಣ್ಣು-ನೀರು



**ಸ. ರಘುನಾಥ**
ಕವಿ, ನಿವೃತ್ತ ಶಿಕ್ಷಕ

ಅತ್ಯಾಚಾರ ಪ್ರಕರಣಗಳಲ್ಲಿ 'ವಿಳಂಬ ನ್ಯಾಯ'ವಾಗುವುದು ಸಂತ್ರಸ್ತರನ್ನು ಖಿನ್ನತೆಗೆ ದೂಡುವಂಥದು. ಕೆಲವು ಸಂತ್ರಸ್ತರೊಂದಿಗೆ ಆಪ್ತಸಮಾಲೋಚನೆ ನಡೆಸಿದ ಹಿನ್ನೆಲೆಯಲ್ಲಿ ಈ ಮಾತು ಆಡುತ್ತಿರುವೆ. ಅತ್ಯಾಚಾರಕ್ಕೆ ಒಳಗಾದ ಹದಿಹರೆಯದ ಹಳ್ಳಿ ಹುಡುಗಿಯೊಬ್ಬಳು ಯಾವ ಸಮಾಲೋಚನೆಯೂ ಫಲಕೊಡದೆ ಆರೆಂಟು ವರ್ಷ ಕೊರಗಿ ಕೊರಗಿ ಈ ಲೋಕವನ್ನೇ ತ್ಯಜಿಸಿದ್ದು ನನ್ನ ವೈಫಲ್ಯವೂ ಆಗಿ ವಿಷಾದದ ನೆನಪಾಗಿ ಉಳಿದಿದೆ. ಒಂಬತ್ತನೆಯ ತರಗತಿ ಓದುವಾಗ ಅತ್ಯಾಚಾರದಿಂದ ನಲುಗಿದ ಹುಡುಗಿಯನ್ನು ಆ 'ಶಾಕ್'ನಿಂದ ಹೊರತರುವಲ್ಲಿ ಸಫಲತೆ ಕಂಡರೂ ಆಕೆಯಲ್ಲಿ ಮಾನಸಿಕವಾಗಿ ಉಂಟಾದ 'ಚಂಚಲತೆ'ಯನ್ನು ಹೋಗಲಾಡಿಸಲು ಮಾಡಿದ ಶತಪ್ರಯತ್ನದಲ್ಲಿ ಪ್ರಗತಿ ಕಾಣಲು ದೂರದ, ಆಕೆಗೆ ಅಪರಿಚಿತವಾದ ಸ್ಥಳಕ್ಕೆ ವಸತಿ ಬದಲಾಯಿಸಿ, ಶಾಲೆಗೆ ಸೇರಿಸಿ, ನಿರ್ವಹಿಸಬೇಕಾಯಿತು.

ಅತ್ಯಾಚಾರ ಮಾಡುವುದು ಮಾಡುವವರಿಗೆ ಸುಲಭವೇನೊ? ಆದರೆ ಅನುಭವಿಸುವವರು ತಾವು 'ಹುಟ್ಟು ನಾರಕಿ'ಗಳೆಂದು ಭಾವಿಸುವಂತಾಗುತ್ತದೆ. ಇಂಥವರಿಗೆ ಕುಟುಂಬದವರೂ ಸೇರಿ, ಸಾಮಾಜಿಕರಿಂದ ವಿಶೇಷ ಬೆಂಬಲದ ಸ್ಥೈರ್ಯ ಅಗತ್ಯ. ಇದರ ಸಾಧ್ಯತೆಯ ಪ್ರಮಾಣ ಸಮಾಜದ ನಡೆಯಲ್ಲಿರುತ್ತದೆ.

ಇತ್ತೀಚಿನ ಸರಣಿ ಅತ್ಯಾಚಾರಗಳನ್ನು ಗಮನಿಸಿದಾಗ, ಸ್ತ್ರೀ ಜಾತಿಯ ಮೇಲೆ 'ಲೈಂಗಿಕ ಭಯೋತ್ಪಾದನೆ' ಶುರುವಾಗಿದೆಯೆ ಎಂದು ಭಯವಾಗುತ್ತದೆ. ಅತ್ಯಾಚಾರ ಅಥವಾ ಲೈಂಗಿಕ ದಾಳಿಯೂ ಶೋಕಿಯಾಗುತ್ತಿದೆಯೆ ಎಂಬ ಪ್ರಶ್ನೆಯೂ ಉಂಟಾಗುತ್ತದೆ. ಪ್ರಶ್ನೆಗಳೇ ಆದರೆ ಹೇಗೆ? ಉತ್ತರ ಬೇಡವೆ? ಯಾರಲ್ಲಿ? ಸಮಾಜದಲ್ಲೆ? ಸಂಘ ಸಂಸ್ಥೆಗಳಲ್ಲೆ? ಕಾನೂನಿನಲ್ಲೆ? ಶಿಕ್ಷಣದಲ್ಲೆ? ಎಲ್ಲದರಲ್ಲಿಯೂ ಎಂಬ ಸಾಮಾನ್ಯೀಕರಣದ ಆಚೆ ಶಿಕ್ಷಣದತ್ತ ತೋರುಬೆರಳು ಇರುವುದನ್ನು ಕಾಣಬಹುದು. ಶಿಕ್ಷಣದ ಪ್ರಮುಖ ಜವಾಬ್ದಾರರು ಶಿಕ್ಷಕರು. ಮಕ್ಕಳಿಗೆ ಹೆಚ್ಚಿನ ನೈತಿಕ ಶಿಕ್ಷಣ ಸಿಗಬೇಕಾದುದು ಇಲ್ಲಿಯೇ. ಇದು ಶಿಕ್ಷಕರಿಗೆ ಬಹುದೊಡ್ಡ ಜವಾಬ್ದಾರಿ. ಇದನ್ನು ಯಾವ ಶಿಕ್ಷಕ ಧೈರ್ಯದಿಂದ ಹೊರುತ್ತಾನೋ ಅಂತಹವನಿಗೆ ಸಾರ್ವಜನಿಕ ಶಿಕ್ಷಣ ಇಲಾಖೆ, ಶಾಲಾ–ಕಾಲೇಜು ಅಭಿವೃದ್ಧಿ ಸಮಿತಿ, ಪೋಷಕ ಸಮುದಾಯ, ಅತಿ ಮುಖ್ಯವಾಗಿ ಸ್ಥಳೀಯ ರಾಜಕಾರಣ ಮುಕ್ತ ಸಹಕಾರ ನೀಡಬೇಕಾಗುತ್ತದೆ.

ನಮ್ಮ ಶಿಕ್ಷಣ ವ್ಯವಸ್ಥೆಯ 'ಕಣ್ಣಪಟ್ಟಿ'ತನವನ್ನು ನೆನೆಯಲೇಬೇಕು. ಮಾಹಿತಿ